ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಉದ್ಭವಿಸುವ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರ ದುರಸ್ಥಿಗಳ ವಾರ್ಷಿಕ ನಿರ್ವಹಣೆಯನ್ನು ನಿಯಮಾನುಸಾರ KHSRDP ಮುಖಾಂತರ ಅಂದಾಜು ಪಟ್ಟಿಯನ್ನು ಪಡೆದು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಅನುಮತಿ ನೀಡುವಂತೆ ಹಾಗೂ ಆಸ್ಪತ್ರೆಯ ಕಟ್ಟಡದ ನಿರ್ವಹಣೆಯ ವೆಚ್ಚವನ್ನು ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

**ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಉದ್ಭವಿಸುವ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರ ದುರಸ್ಥಿಗಳ ವಾರ್ಷಿಕ ನಿರ್ವಹಣೆಯನ್ನು ನಿಯಮಾನುಸಾರ KHSRDP ಮುಖಾಂತರ ಅಂದಾಜು ಪಟ್ಟಿಯನ್ನು ಪಡೆದು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಹಾಗು ಇದಕ್ಕೆ ತಗುಲುವ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ (A.R.S) ಖಾತೆಯಲ್ಲಿ ಕಾಲಕಾಲಕ್ಕೆ ಸಂಗ್ರಹವಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 20 | ರೋಗಿಗಳ ಚಿಕಿತ್ಸೆಯ ನಿಮಿತ್ತ ಅವಶ್ಯವಿರುವ ಇಸಿಜಿ ತಂತ್ರಜ್ಞರು ಹಾಗೂ ಡಯಾಲಿಸಿಸ್ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ |

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದಿನದಿಂದ ದಿನಕ್ಕೆ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಹಿನ್ನಲೆಯಲ್ಲಿ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ. ರಿಮ್ಸ್ ಬೋಧಕ ಆಸ್ಪತ್ರೆಗೆ ಹೃದಯ ಸಂಬಂಧಿ ಹಾಗೂ ಕಿಡ್ನಿಗೆ ಸಂಬಂಧಿಸಿದ ರೋಗಿಗಳು ಹೆಚ್ಚಿನ ಮಟ್ಟದಲ್ಲಿ ಆಸ್ಪತ್ರೆಗೆ ದಾಖಲಾಗುತ್ತಿರುವುದರಿಂದ, ಲಭ್ಯವಿರುವ ಸಿಬ್ಬಂದಿಯಿಂದ ಚಿಕಿತ್ಸೆ ನೀಡಲು ತೊಂದರೆ ಉಂಟಾಗಿರುತ್ತದೆ. ಮತ್ತು ರಿಮ್ಸ್ ಸಂಸ್ಥೆಗೆ ಇಜಿಸಿ ತಂತ್ರಜ್ಞರ ಹುದ್ದೆಯು ಒಂದು ಮಂಜೂರಾಗಿರುವುದರಿಂದ ಓರ್ವ ಸಿಬ್ಬಂದಿಯಿಂದ ಕಾರ್ಯನಿರ್ವಹಿಸಲು ಆಗುತ್ತಿರುವುದಿಲ್ಲ ಮತ್ತು ಡಯಾಲಿಸಿಸ್ ತಂತ್ರಜ್ಞ ಹುದ್ದೆಗಳು ರಿಮ್ಸ್ ಸಂಸ್ಥೆಗೆ ಮಂಜೂರು ಆಗಿರುವುದಿಲ್ಲ. ಈ ಹಿನ್ನಲೆಯಲ್ಲಿ ರೋಗಿಗಳಿಗೆ ನಿಗದಿತ ಅವಧಿಯಲ್ಲಿ ಚಿಕಿತ್ಸೆಯನ್ನು ನೀಡಲು 02 ಇಜಿಸಿ ತಂತ್ರಜ್ಞರು ಹಾಗು 02 ಡಯಾಲಿಸಿಸ್ ತಂತ್ರಜ್ಞರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಅತಿ ಅವಶ್ಯವಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಗೆ ಹೃದಯ ಸಂಬಂಧಿ ಹಾಗು ಕಿಡ್ನಿ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ನಿಗದಿತ ಅವಧಿಯಲ್ಲಿ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುವಂತೆ 02 ಇಜಿಸಿ ತಂತ್ರಜ್ಞರು ಹಾಗು 02 ಡಯಾಲಿಸಿಸ್ ತಂತ್ರಜ್ಞರ ಹುದ್ದೆಗಳನ್ನು ಸೃಜಿಸಲು ಹಾಗೂ ಹುದ್ದೆಗಳ ಸೃಜನೆ ಆಗುವವರೆ ಸದರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

**ರಿಮ್ಸ್ ಬೋಧಕ ಆಸ್ಪತ್ರೆಗೆ ಹೃದಯ ಸಂಬಂಧಿ ಹಾಗು ಕಿಡ್ನಿ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ನಿಗದಿತ ಅವಧಿಯಲ್ಲಿ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುವಂತೆ 02 ಇಜಿಸಿ ತಂತ್ರಜ್ಞರು (ಎಲೆಕ್ಟ್ರೋ ಕಾರ್ಡಿಯಾಗ್ರಫರ್) ಹಾಗು 02 ಡಯಾಲಿಸಿಸ್ ತಂತ್ರಜ್ಞರ ಹುದ್ದೆಗಳನ್ನು ಪ್ರಸ್ತುತ ರಿಮ್ಸ್ ಸಂಸ್ಥೆಗೆ ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಅನುಮತಿ ನೀಡಲಾಯಿತು.**

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| ವಿಷಯ ಸೂಚಿ ಸಂಖ್ಯೆ – 21 | ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋದಕ ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 50 ಸ್ವಚ್ಛತಾ ಸಿಬ್ಬಂದಿಗಳು ಹಾಗೂ 40 ಗೃಹ ರಕ್ಷಕರ ಸೇವೆಯನ್ನು ಹೆಚ್ಚುವರಿಯಾಗಿ ಪಡೆಯಲು ಅನುಮತಿ ನೀಡುವ ಕುರಿತು |
|---|---|

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಸ್ವಚ್ಛತಾ ಸಿಬ್ಬಂದಿಗಳು ಹಾಗೂ ಸಫಾಯಿ ಕರ್ಮಚಾರಿಗಳು ಸೇರಿ ಒಟ್ಟು 206 ಸಿಬ್ಬಂದಿಗಳನ್ನು ಹೊರಗುತ್ತಿಗೆಯ ಮೂಲಕ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಸೇವೆಯನ್ನು ಪಡೆಯಲಾಗುತ್ತಿದೆ.

ಈ ಹಿಂದೆ 100 ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಗೆ ತಕ್ಕಂತೆ ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯ ಮೂಲಕ ಪಡೆಯಲಾಗಿತ್ತು. ಆದರೆ ಪ್ರಸ್ತುತ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲಾಗಿರುತ್ತದೆ. ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದ ಪ್ರಕಾರ ವಿಭಾಗಗಳನ್ನು ಮಾರ್ಪಡಿಸಿ ವಿಸ್ತರಿಸಲಾಗಿರುತ್ತದೆ. ಹಾಗೂ ಆಸ್ಪತ್ರೆಯ ಹಾಸಿಗೆಯ ಸಾಮಾರ್ಥ್ಯವನ್ನು 500 ರಿಂದ 650 ಹಾಸಿಗೆಗಳಿಗೆ ಹೆಚ್ಚಿಸಲಾಗಿರುತ್ತದೆ. ಹಾಗೂ ರೋಗಿಗಳ ಸಂಖ್ಯೆ. ದಿನದಿಂದ ದಿನಕ್ಕೆ ಹೆಚ್ಚಳವಾಗಿರುತ್ತದೆ. ಮತ್ತು ಈ ಮೊದಲು ಓಪಿಡಿ 400 ರಿಂದ 500 ಇರುತ್ತಿತ್ತು. ಪ್ರಸ್ತುತ 950 ರಿಂದ 1000 ಮೇಲ್ಪಟ್ಟು ಆಗಿರುತ್ತದೆ. ಅದೇ ರೀತಿ ಒಳರೋಗಿಗಳ ಸಂಖ್ಯೆ. 350 ರಿಂದ 400 ಇದ್ದದ್ದು, 800 ರಿಂದ 900 ಆಗಿರುತ್ತದೆ. ಪ್ರವೇಶಾತಿ ಹೆಚ್ಚಳವಾಗಿರವುದರಿಂದ ನೂತನ ಆಸ್ಪತ್ರೆಯ ಕಟ್ಟಡದಲ್ಲಿನ ಎಲ್ಲಾ ಕೊಠಡಿ / ವಾರ್ಡ್‌ಗಳು ಮತ್ತು 200 ಹೆಚ್ಚು ಶೌಚಾಲಯಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತೆಗೆ ದೈನಂದಿನ ಸ್ವಚ್ಛತೆಯ ಹಿತದೃಷ್ಟಿಯಿಂದ ಈಗಾಗಲೇ 206 ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಹೆಚ್ಚುವರಿಯಾಗಿ ಅವಶ್ಯವಿರುವ 50 ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ 40 ಗೃಹ ರಕ್ಷಕ ಸಿಬ್ಬಂದಿಗಳನ್ನು ಗೃಹರಕ್ಷಕ ದಳದಿಂದ ಪಡೆಯುವುದು ಅನಿವಾರ್ಯವಾಗಿರುತ್ತದೆ.

| ಕ್ರಮ ಸಂಖ್ಯೆ | ಸಿಬ್ಬಂದಿಗಳ ವಿವರ | ಪ್ರಸ್ತುತ ಸೇವೆ ಪಡೆಯಲಾಗುತ್ತಿರುವ ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆ. | ಇನ್ನು ಅವಶ್ಯವಿರುವ ಹೆಚ್ಚುವರಿ ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆ | ಒಟ್ಟು ಅವಶ್ಯವಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|---|
| 1 | ಸ್ವಚ್ಛತಾ ಸಿಬ್ಬಂದಿಗಳು | 150 (ರಿಮ್ಸ್) + 36 (ಓಪೆಕ್ = 186 | 75 | 225 |
| 2 | ಸಫಾಯಿ ಕರ್ಮಚಾರಿಗಳು | 10 | 10 | 20 |
| 3 | ನಿರ್ವಹಣಾ ವಿಭಾಗಕ್ಕೆ ಅವಶ್ಯವಿರುವ ಸಿಬ್ಬಂದಿಗಳು | 22 | – | 22 |
| ಒಟ್ಟು | | 218 | 85 | 267 |

ಕಾರಣ ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 206 ಸ್ವಚ್ಛತಾ ಸಿಬ್ಬಂದಿಗಳ ಜೊತೆಗೆ ಹೆಚ್ಚುವರಿಯಾಗಿ 50 ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯ ಮೂಲಕ ಹಾಗು 40 ಗೃಹರಕ್ಷಕರನ್ನು ಗೃಹ ರಕ್ಷಕ ದಳದ ಮುಖಾಂತರ ಪಡೆಯಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

**ಸಭೆಯ ತೀರ್ಮಾನ :-**

**ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 85 ಸ್ವಚ್ಚತಾ ಸಿಬ್ಬಂದಿಗಳು ಹಾಗು 40 ಗೃಹರಕ್ಷಕರ ಸೇವೆಯನ್ನು ಹೆಚ್ಚುವರಿಯಾಗಿ ಪಡೆಯುವ ನಿಟ್ಟಿನಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮುಖಾಂತರ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು.**

| ವಿಷಯ ಸೂಚಿ ಸಂಖ್ಯೆ – 22 | ರಿಮ್ಸ್, ರಾಯಚೂರಿಗೆ 2019–20ನೇ ಸಾಲಿಗೆ ಅವಶ್ಯಕವಾಗಿ ಬೇಕಾಗಿರುವ ರೂ. 1207.42 ಲಕ್ಷಗಳ ಅನುದಾನವನ್ನು ಮರು ಪಾವತಿಯ ಷರತ್ತಿನ ಮೇಲೆ ಬಳಕೆಗೆ ಅನುಮತಿ ನೀಡುವ ಬಗ್ಗೆ |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿಗೆ 2019–20ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆಮಾಡಲಾದ ಅನುದಾನವು ಕೊರತೆಯಾಗುತ್ತಿದ್ದು, ವೇತನಗಳು, ಗಳಿಕೆರಜೆ ನಗದೀಕರಣ, ಸ್ನಾತಕೋತ್ತರ ಮತ್ತು ಗೃಹವೈದ್ಯರ ಶಿಷ್ಯವೇತನ, ಔಷದಗಳು, ರಾಸಯನಿಕಗಳು, ಸಂಚಿತ ವೇತನದ ಸಿಬ್ಬಂದಿಗಳ ವೇತನ, ಹೊರಗುತ್ತಿಗೆ ನೌಕರರ ವೇತನ ಹಾಗೂ ಇತರ ವೆಚ್ಚಗಳಿಗಾಗಿ ಪಾವತಿಸಲು ತೊಂದರೆಯಾಗುತ್ತಿದೆ. ರಿಮ್ಸ್ ರಾಯಚೂರಿಗೆ 2019–20ನೇ ಸಾಲಿನಲ್ಲಿ ಸರ್ಕಾರವು ನಿಗದಿಪಡಿಸಿದ ಅನುದಾನದ ವಿವರಗಳು ಈ ಕೆಳಗಿನಂತೆ ವಿವರಿಸಲಾಗಿದೆ.

| ಕ್ರ.ಸಂ. | ಲೆಕ್ಕಶೀರ್ಷಿಕೆ | ನಿಗದಿಪಡಿಸಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ವೆಚ್ಚವಾಗಿರುವ ಅನುದಾನ | ಕೊರತೆಯಾದ ಅನುದಾನ |
|---|---|---|---|---|---|
| 1 | 2210–05–105–1–54–101 | 3982.00 | 3982.00 | 3982.00 | 438.72 |
| 2 | 2210–05–105–1–54–103 | 759.00 | 759.00 | 1179.00 | 180.40 |
| 3 | 2210–05–105–1–54–115 | 812.00 | 812.00 | 812.00 | 168.30 |
| ಒಟ್ಟು | | 5553.00 | 5553.00 | 5973.00 | 787.42 |

2019–20ನೇ ಸಾಲಿನ ರಿಮ್ಸ್ ಸಂಸ್ಥೆಯ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ.1207.42 ಲಕ್ಷ ರೂಗಳ ಅನುದಾನ ಕೊರತೆಯಾಗಿದ್ದು ಇದರ ಪೈಕಿ ರೂ. 420.00 ಲಕ್ಷ ರೂಗಳನ್ನು ಜುಲೈ–2019 ಮಾಹೆಯಿಂದ ಇಲ್ಲಿಯವರೆಗೆ ಕೊರತೆಯನ್ನು ಪೂರೈಸುವ ಸಲುವಾಗಿ ರಾ.ಗಾಂ.ಸೂ.ಸ್ಪೆ(ಓಪೆಕ್) ಲೆಕ್ಕಶೀರ್ಷಿಕೆ ಅಡಿಯಲ್ಲಿ ಜಮೆಯಾಗಿರುವ ಬಡ್ಡಿಮೊತ್ತದಲ್ಲಿ ಕೊರತೆಯನ್ನು ಪೂರೈಸಲಾಗಿದೆ, ರಾ.ಗಾಂ.ಸೂ.ಸ್ಪೆ(ಓಪೆಕ್) ಲೆಕ್ಕಶೀರ್ಷಿಕೆ ಅಡಿಯಲ್ಲಿ 2014–15ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು ರೂ.623 ಲಕ್ಷ ರೂಗಳ ಬಡ್ಡಿ ಜಮೆ ಆಗಿದ್ದು, ಇದರ ಪೈಕಿ ಮೇಲೆ ತಿಳಿಸಿರುವ ರೂ.420.00 ಲಕ್ಷ ರೂ ಗಳನ್ನು ಈಗಾಗಲೇ ಉಪಯೋಗಿಸಿಕೊಳ್ಳಲಾಗಿದ್ದು, ಇದಕ್ಕೆ ಘಟನೋತ್ತರ ಅನುಮೋದನೆ ನೀಡಲು ಈ ಕಾರ್ಯಲಯದ ಪತ್ರ ಸಂಖ್ಯೆ. ರಿಮ್ಸ್ / ಲೆಕ್ಕಪತ್ರ / 2019–20 / 2121 ದಿನಾಂಕ 31.03.2020 ರನ್ವಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಸರ್ಕಾರದಿಂದ ಈವರೆಗೆ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

ಲೆಕ್ಕಶೀರ್ಷಿಕೆ 2210–01–110–2–37–101 ಅಡಿಯಲ್ಲಿ ಉಳಿದಿರುವ ಅನುದಾನದ ಮಾಹಿತಿಯು ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ. | ಲೆಕ್ಕಶೀರ್ಷಿಕೆ | ವರ್ಷ | ನಿಗದಿಪಡಿಸಿದ ಅನುದಾನ | ಬಿಡುಗಡೆ ಮಾಡಿದ ಅನುದಾನ | ವೆಚ್ಚವಾಗಿರುವ ಅನುದಾನ | ಬಾಕಿ ಉಳಿದ ಅನುದಾನ |
|---|---|---|---|---|---|---|
| 1 | 2210–01–110–2–37–101 | 2014–15 | 1500.00 | 1125.00 | 241.14 | 883.86 |
| 2 | 2210–01–110–2–37–101 | 2015–16 | 905.00 | 678.75 | 453.80 | 224.95 |
| ಒಟ್ಟು | | | 2405.00 | 1803.75 | 694.94 | 1108.81 |

ಜೊತೆಗೆ 2019–20ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಬೇಕಾಗಿರುವ ರೂ.787.42 ಲಕ್ಷ ರೂಗಳ ಅನುದಾನವನ್ನು ರಾ.ಗಾಂ.ಸೂ.ಸ್ವೆ(ಓಪೆಕ್) ಲೆಕ್ಕಶೀರ್ಷಿಕೆ 2210-01-110-2-37-101 ಅಡಿಯಲ್ಲಿ 2014–15 ಮತ್ತು 2015–16ನೇ ಸಾಲಿನಲ್ಲಿ ಉಪಯೋಗಿಸದೇ ಬಾಕಿ ಉಳಿದಿರುವ ಒಟ್ಟು ರೂ.1108.81 ಗಳನ್ನು ಮರು ಪಾವತಿಯ ಷರತ್ತಿನ ಮೇಲೆ ಬಳಕೆ ಮಾಡಿಕೊಳ್ಳಲು ಹಾಗೂ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :–**

**ಸದರಿ ವಿಷಯದ ಕುರಿತು ಪ್ರಸ್ತಾವನೆಯು ಈಗಾಗಲೇ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿರುವುದರಿಂದ, ಆರ್ಥಿಕ ಇಲಾಖೆಯು ನೀಡುವ ನಿರ್ದೇಶನದಂತೆ ಕ್ರಮಜರುಗಿಸಲು ಆರ್ಥಿಕ ಸಮಿತಿ ಸಭೆಯು ತೀರ್ಮಾನಿಸಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 23 | ರಿಮ್ಸ್ ಸಂಸ್ಥೆಯಲ್ಲಿ ಸ್ಟೈಫೆಂಡರಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಡಿ ಸಿಬ್ಬಂದಿಗಳಿಗೆ ಆಯಾ ಹುದ್ದೆಯ ಮೂಲ ವೇತನವನ್ನು (ಇತರ ಭತ್ಯೆಗಳನ್ನು ಹೊರತುಪಡಿಸಿ) ನಿಗದಿಪಡಿಸಿ ಪಾವತಿಸಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 100 ವೈದ್ಯ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಶ್ಯವಿರುವ ವಿವಿಧ ಗ್ರೂಪ್ ಸಿ ಮತ್ತು ಡಿ ಹುದ್ದೆಗಳನ್ನು ಸಂಚಿತ ವೇತನದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, 2017–18 ನೇ ಸಾಲಿನಿಂದ ರಿಮ್ಸ್ ಸಂಸ್ಥೆಯಲ್ಲಿ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಳ ಮಾಡಿರುವುದರಿಂದ ಪ್ರವೇಶಾತಿಗೆ ಅನುಗುಣವಾಗಿ ಅವಶ್ಯವಿರುವ ವಿವಿಧ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಸ್ಟೈಫೆಂಡರಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಈಗಾಗಲೇ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 224 / ಎಂಇಂಇ / 2018 ದಿನಾಂಕ 26.02.2019 ರನ್ವಯ ಆಯಾ ಹುದ್ದೆಯ ಮೂಲ ವೇತನವನ್ನು (ಇತರ ಭತ್ಯೆಗಳನ್ನು ಹೊರತುಪಡಿಸಿ) ನಿಗದಿಪಡಿಸಿ ಪಾವತಿಸಲಾಗುತ್ತಿದ್ದು, ಸ್ಟೈಫೆಂಡರಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ತಮಗೂ ಸಹ ಆಯಾ ಹುದ್ದೆಯ ಮೂಲ ವೇತನವನ್ನು (ಇತರ ಭತ್ಯೆಗಳನ್ನು ಹೊರತುಪಡಿಸಿ) ನಿಗದಿಪಡಿಸಿ ಪಾವತಿಸುವಂತೆ ಕೋರಿರುತ್ತಾರೆ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

ಕಾರಣ ರಿಮ್ಸ್ ಸಂಸ್ಥೆ ಹಾಗು ರಿಮ್ಸ್ ಜಿಲ್ಲಾ ಬೋಧಕ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಸ್ಟೈಫೆಂಡರಿ ಆಧಾರದ ಮೇಲೆ 5 ವರ್ಷಗಳಿಗಿಂತ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಡಿ ಸಿಬ್ಬಂದಿಗಳಿಗೆ ಆಯಾ ಹುದ್ದೆಯ ಮೂಲ ವೇತನವನ್ನು (ಇತರ ಭತ್ಯೆಗಳನ್ನು ಹೊರತುಪಡಿಸಿ) ಸರ್ಕಾರದ ಆದೇಶ ಸಂಖ್ಯೆ. ಆಕುಕ / 224 / ಎಂಎಂಇ / 2018 ದಿನಾಂಕ 26.02.2019 ರನ್ವಯ ನಿಗದಿಪಡಿಸಿ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮತಿ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಹುದ್ದೆ | ನೇಮಕಾತಿ ಮಾಡಿಕೊಳ್ಳಲಾದ ಸಿಬ್ಬಂದಿಗಳ ಸಂಖ್ಯೆ |
|---|---|---|
| 1 | ಶುಶ್ರೂಷಕರು | 10 + 29 + 2 = 41 |
| 2 | ಪ್ರಯೋಗಶಾಲ / ಓಟಿ / ಕ್ಷ –ಕಿರಣ ತಂತ್ರಜ್ಞರು | 40 |
| 3 | ಗ್ರೂಪ್ ಸಿ | 03 |
| 3 | ಗ್ರೂಪ್ ಡಿ | 54 |

**ಸಭೆಯ ತೀರ್ಮಾನ :–**

**ಸದರಿ ಪ್ರಸ್ತಾವನೆಯನ್ನು ಆರ್ಥಿಕ ಸಮಿತಿ ಸಭೆಯಲ್ಲಿ ತಿರಸ್ಕರಿಸಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 24 | ರಿಮ್ಸ್ ಆವರಣದಲ್ಲಿರುವ ರಿಮ್ಸ್ ವೈದ್ಯಕೀಯ ಕಾಲೇಜು, ವಿದ್ಯಾರ್ಥಿಗಳ ವಸತಿ ನಿಲಯಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳ ನಿರ್ವಹಣೆಯನ್ನು ಕೈಗೊಳ್ಳುವ ಬಗ್ಗೆ |

ರಿಮ್ಸ್ ಆವರಣದಲ್ಲಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳ ವಾಸ್ತವ್ಯದ ಸಂಬಂಧ ಪ್ರತ್ಯೇಕವಾಗಿ ವಸತಿ ನಿಲಯಗಳನ್ನು ಹಾಗು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಆವರಣದಲ್ಲಿ 164 ಕೊಠಡಿಗಳುಳ್ಳ ವಿದ್ಯಾರ್ಥಿಗಳ ವಸತಿ ನಿಲಯ, 164 ಕೊಠಡಿಗಳುಳ್ಳ ವಿದ್ಯಾರ್ಥಿನಿಯರ ವಸತಿ ನಿಲಯವಿದೆ. ಹಾಗೂ 48 ಬೋಧಕ ಮತ್ತು 64 ಬೋಧಕೇತರ ಸಿಬ್ಬಂದಿ ವಸತಿ ಗೃಹಗಳಿರುತ್ತವೆ.

ಪ್ರಸ್ತುತ ಆವರಣದಲ್ಲಿರುವ ವಸತಿ ನಿಲಯಗಳು ಹಾಗೂ ವಸತಿ ಸಮುಚ್ಚಯಗಳನ್ನು ನಿರ್ಮಾಣ ಮಾಡಿ 12 ವರ್ಷಗಳಾಗಿರುವುದರಿಂದ, ಕಟ್ಟಡಗಳ ಹೊರಭಾಗದಲ್ಲಿನ ಪೈಪ್‌ಲೈನ್‌ಗಳು ತುಕ್ಕು ಹಿಡಿದು ಎಲ್ಲೆಂದರಲ್ಲಿ ನೀರು ಸೋರಿಕೆಯಾಗುತ್ತಿವೆ. ಈ ಹಿನ್ನಲೆಯಲ್ಲಿ ಆರ್ಥಿಕ ಸಮಿತಿ ಸಭೆಯ ಅನುಮತಿ ಪಡೆದು ಆರ್ಥಿಕತೆ ಲಭ್ಯತೆಗೆ ಅನುಗುಣವಾಗಿ ಕಟ್ಟಡಗಳ ಹೊರಭಾಗದಲ್ಲಿ ಪೈಪ್‌ಲೈನ್‌ಗಳನ್ನು ಬದಲಾಯಿಸುವ ಕಾರ್ಯವನ್ನು ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳಲಾಗಿರುತ್ತದೆ.

ಸದರಿ ಕಟ್ಟಡಗಳ ಒಳಭಾಗದಲ್ಲಿ ಹಲವು ಪ್ಲಂಬಿಂಗ್ ಮತ್ತು ವಿದ್ಯುತ್ ದುರಸ್ಥಿ ಕಾರ್ಯಗಳಿದ್ದು, ಅವುಗಳನ್ನು ಸರಿಪಡಿಸಬೇಕಾಗಿರುತ್ತದೆ. ಹಾಗೂ ಪ್ಲಂಬಿಂಗ್ ಮತ್ತು ವಿದ್ಯುತ್ ದುರಸ್ಥಿ ಕಾರ್ಯಗಳನ್ನು ಪೂರ್ಣಗೊಳಿಸಿದ ನಂತರ ಸದರಿ ಕಟ್ಟಡಗಳಿಗೆ ಬಣ್ಣವನ್ನು ಹಚ್ಚಬೇಕಾಗಿರುತ್ತದೆ. ಕಟ್ಟಡಗಳ ನಿರ್ವಹಣೆಯನ್ನು ಮೇಲಿಂದ ಮೇಲೆ ಕೈಗೊಂಡಲ್ಲಿ ಮಾತ್ರ ಕಟ್ಟಡಗಳು ಸುಸ್ಥಿತಿಯಲ್ಲಿರುತ್ತವೆ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

ಕಾರಣ ರಿಮ್ಸ್ ಆವರಣದಲ್ಲಿರುವ ರಿಮ್ಸ್ ವೈದ್ಯಕೀಯ ಕಾಲೇಜು, ವಿದ್ಯಾರ್ಥಿಗಳ ವಸತಿ ನಿಲಯಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳ ನಿರ್ವಹಣೆಯನ್ನು ನಿಯಮಾನುಸಾರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರಿಂದ ಅಂದಾಜು ಪಟ್ಟಿ ಪಡೆದು ನಿರ್ವಹಣೆಯನ್ನು ಕೈಗೊಳ್ಳಲು ಹಾಗೂ ಸದರಿ ಕಾಮಗಾರಿಗೆ ಸಲ್ಲುವ ವೆಚ್ಚದ ಕುರಿತು ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

**ಸದರಿ ಪ್ರಸ್ತಾವನೆಯನ್ನು ಆರ್ಥಿಕ ಸಮಿತಿ ಸಭೆಯಲ್ಲಿ ತಿರಸ್ಕರಿಸಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 25 | ಭಾರತೀಯ ವೈದ್ಯಕೀಯ ಪರಿಷತ್ ನಿಯಮಾವಳಿಯಂತೆ ಶುಶ್ರೂಷಾಧಿಕಾರಿಗಳ ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಅನುಮತಿ ನೀಡುವ ಕುರಿತು. |

ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 07.09.2006 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 100 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಾತಿಗೆ 255 ಶುಶ್ರೂಷಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಈಗಾಗಲೇ ರಿಮ್ಸ್ ಸಂಸ್ಥೆಯಲ್ಲಿ 150 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಾತಿಯನ್ನು 2017–18 ರಿಂದ ಪ್ರಾರಂಭ ಮಾಡಲಾಗಿದ್ದು, 150 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಾತಿಗೆ ಒಟ್ಟು 309 ಹಾಗು 30% ರಜೆ ಮೀಸಲು ಸೇರಿ ಒಟ್ಟು 402 ಶುಶ್ರೂಷಾಧಿಕಾರಿಗಳ ಹುದ್ದೆಗಳು ಅವಶ್ಯಕತೆಯಿರುತ್ತದೆ. ಪ್ರಸ್ತುತ ರಿಮ್ಸ್ ಸಂಸ್ಥೆಯಲ್ಲಿ 186 ಶುಶ್ರೂಷಾಧಿಕಾರಿಗಳು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.

ಕಾರಣ ರಿಮ್ಸ್ ವೈದ್ಯಕೀಯ ಆಸ್ಪತ್ರೆಯ ದಿನನಿತ್ಯದ ಕಾರ್ಯಗಳು ಸುಗಮವಾಗಿ ಜರುಗಿಸಲು ಹಾಗೂ ರೋಗಿಗಳೀಗೆ ಗುಣಮಟ್ಟದ ಚಿಕಿತ್ಸೆಯನ್ನು ನೀಡಲು ಅವಶ್ಯವಿರುವ 147 ಶುಶ್ರೂಷಾಧಿಕಾರಿಗಳ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಪದನಾಮ | ಎಂ.ಸಿ.ಐ ನಿಯಮಾವಳಿ ಅನ್ವಯ ಅವಶ್ಯವಿರುವ ಶುಶ್ರೂಷಾಧಿಕಾರಿಗಳ ಸಂಖ್ಯೆ. | ಮಂಜೂರಾದ ಶುಶ್ರೂಷಾಧಿಕಾರಿಗಳ ಸಂಖ್ಯೆ. | ಹೊಸದಾಗಿ ಸೃಜಿಸಬೇಕಾದ ಶುಶ್ರೂಷಾಧಿಕಾರಿಗಳ ಸಂಖ್ಯೆ. |
|---|---|---|---|---|
| 1 | ಶುಶ್ರೂಷಾಧಿಕಾರಿಗಳು | 402 (309 + 93) 309 ಹಾಗೂ 30% ರಜೆ ಮೀಸಲು | 255 | 147 |

**ಸಭೆಯ ತೀರ್ಮಾನ :-**

**ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಳ ಮಾಡಲಾಗಿರುವುದರಿಂದ, ಭಾರತೀಯ ವೈದ್ಯಕೀಯ ಪರಿಷತ್ ನಿಯಮಾವಳಿಯಂತೆ ಅವಶ್ಯವಿರುವ ಒಟ್ಟು 147 ಹೆಚ್ಚುವರಿ ಶುಶ್ರೂಷಾಧಿಕಾರಿಗಳ ಹುದ್ದೆಗಳ ಸೃಜನೆಯ ಸಂಬಂಧ ವಿವರವಾದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.**

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| | |
|---|---|
| ವಿಷಯ ಸೂಚಿ ಸಂಖ್ಯೆ – 26 | ಭಾರತೀಯ ವೈದ್ಯಕೀಯ ಪರಿಷತ್ ನಿಯಮಾವಳಿಯಂತೆ ಶುಶ್ರೂಷಕ ಆಡಳಿತ ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಅನುಮತಿ ನೀಡುವ ಕುರಿತು. |

ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 07.09.2006 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 100 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಾತಿಗೆ 255 ಶುಶ್ರೂಷಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಎಂ.ಸಿ.ಐ ನಿಯಮಾವಳಿಯನ್ವಯ ಅವಶ್ಯಕವಿರುವ ಶುಶ್ರೂಷಕ ಆಡಳಿತ ಹುದ್ದೆಗಳಾದ ಶುಶ್ರೂಷಕ ಅಧೀಕ್ಷಕರು, ಸಹ ಶುಶ್ರೂಷಕ ಅಧೀಕ್ಷಕರು, ಸಹಾಯಕ ಶುಶ್ರೂಷಕ ಅಧೀಕ್ಷಕರು ಮತ್ತು ಹಿರಿಯ ಶುಶ್ರೂಷಕಾಧಿಕಾರಿಗಳ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ರಿಮ್ಸ್ ಸಂಸ್ಥೆಗೆ 150 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ದೊರೆತಿರುವುದರಿಂದ ಸದರಿ ಹುದ್ದೆಗಳು ಅತಿ ಅವಶ್ಯಕವಾಗಿರುತ್ತವೆ.

| ಕ್ರಮ ಸಂಖ್ಯೆ | ಪದನಾಮ | ಎಂ.ಸಿ.ಐ ನಿಯಮಾವಳಿ ಅನ್ವಯ ಅವಶ್ಯವಿರುವ ಶುಶ್ರೂಷಾಧಿಕಾರಿಗಳ ಸಂಖ್ಯೆ. | ಮಂಜೂರಾದ ಶುಶ್ರೂಷಾಧಿಕಾರಿಗಳ ಸಂಖ್ಯೆ. | ಹೊಸದಾಗಿ ಸೃಜಿಸಬೇಕಾದ ಶುಶ್ರೂಷಾಧಿಕಾರಿಗಳ ಸಂಖ್ಯೆ. |
|---|---|---|---|---|
| 1 | ಶುಶ್ರೂಷಕ ಅಧೀಕ್ಷಕರು | 01 | – | 01 |
| 2 | ಉಪ ಶುಶ್ರೂಷಕ ಅಧೀಕ್ಷಕರು | 05 | – | 05 |
| 3 | ಸಹಾಯಕ ಶುಶ್ರೂಷಕ ಅಧೀಕ್ಷಕರು | 12 | – | 12 |
| 4 | ಹಿರಿಯ ಶುಶ್ರೂಷಕರು | 45 | – | 45 |
| | ಒಟ್ಟು | | | 63 |

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸುಮಾರು 11 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶುಶ್ರೂಷಾಧಿಕಾರಿಗಳು ಸದರಿ ಆಡಳಿತ ಹುದ್ದೆಗಳಿಗೆ ಅರ್ಹರಿದ್ದು, ಈವರೆಗೆ ಆಡಳಿತ ಹುದ್ದೆಗಳನ್ನು ಸೃಜಿಸಿಲ್ಲವಾದ್ದರಿಂದ ಸಿಬ್ಬಂದಿಗಳು ಪದೋನ್ನತಿಗೆ ವಂಚಿತರಾಗಿರುತ್ತಾರೆ. ಕಾರಣ ಆಸ್ಪತ್ರೆಯ ದಿನನಿತ್ಯದ ಆಡಳಿತ ಕಾರ್ಯಗಳು ಸುಗಮವಾಗಿ ನಡೆಸಲು ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆಯನ್ನು ನೀಡಲು ಅವಶ್ಯವಿರುವ ಒಟ್ಟು 63 ಶುಶ್ರೂಷಕ ಆಡಳಿತ ಹುದ್ದೆಗಳನ್ನು ಸೃಜಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :–**

**ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಂತೆ ಒಟ್ಟು 63 ಶುಶ್ರೂಷಕ ಆಡಳಿತ ಹುದ್ದೆಗಳನ್ನು ಸೃಜಿಸುವ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳೊಡಿ ಪ್ರಸ್ತಾವನೆಯನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.**

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| ವಿಷಯ ಸೂಚಿ ಸಂಖ್ಯೆ – 27 | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶುಶ್ರೂಷಾಧಿಕಾರಿಗಳಿಗೆ ಹಾಗೂ ಗ್ರೂಪ್ ಡಿ ಸಿಬ್ಬಂದಿಗಳಿಗೆ ಹೊಸ ಪಿಂಚಣಿ, ಕೆ.ಜಿ.ಐ.ಡಿ ಹಾಗೂ ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆಗಳನ್ನು ಅಳವಡಿಸಲು ಅನುಮತಿ ನೀಡುವ ಕುರಿತು. |
|---|---|

ಸರ್ಕಾರದ ಆದೇಶ ಸಂಖ್ಯೆ. ಆಕುಕ 59 / ಎಂಎಸ್‌ಎಫ್ / 2017 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಿನಾಂಕ 01.04.2006 ರ ನಂತರ ಖಾಯಂ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಾಧಿಕಾರಿಗಳು ಹಾಗೂ ಗ್ರೂಪ್ ಡಿ ಸಿಬ್ಬಂದಿಗಳಿಗೆ ಸೇವಾ ಭದ್ರತೆಯನ್ನು ಒದಗಿಸುವ ಎನ್.ಪಿ.ಎಸ್, ಕೆ.ಜಿ.ಐ.ಡಿ ಹಾಗೂ ಜ್ಯೋತಿ ಸಂಜೀವಿನಿ ಯೋಜನೆಗಳನ್ನು ಅನುಷ್ಟಾನಗೊಳಿಸಿರುವುದಿಲ್ಲ. ಇದರಿಂದಾಗಿ ಶುಶ್ರೂಷಾಧಿಕಾರಿಗಳು ಹಾಗು ಗ್ರೂಪ್ ಡಿ ಸಿಬ್ಬಂದಿಗಳು ಯಾವುದೇ ಸೇವಾ ಭದ್ರತೆ ಇಲ್ಲದೇ ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ಬಡರೋಗಿಗಳ ವೈದ್ಯಕೀಯ ಚಿಕಿತ್ಸೆ, ಹಾರೈಕೆ ಹಾಗೂ ಸೇವೆಯನ್ನು ಮಾಡುತ್ತಿದ್ದು, ಸದರಿ ನೌಕರರ ಸಂಧ್ಯಾಕಾಲದ ಬದುಕಿಗೆ ಆಸರೆ ಇಲ್ಲದಂತಾಗಿದೆ. ಹಾಗು ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಇರುವಂತಹ ಹೊಸ ಪಿಂಚಣಿ ಯೋಜನೆ, ಕೆ.ಜಿ.ಐ.ಡಿ ಹಾಗೂ ಜ್ಯೋತಿ ಸಂಜೀವಿನಿ ಯೋಜನೆಗಳ ಸೌಲಭ್ಯವು ರಿಮ್ಸ್ ಸಂಸ್ಥೆಯಲ್ಲಿ ಇರುವುದಿಲ್ಲ.

ಕಾರಣ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸೇವಾ ಭದ್ರತೆಯನ್ನು ಒದಗಿಸಿ ಸಂಧ್ಯಾಕಾಲದ ಬದುಕಿಗೆ ದಾರಿ ದೀಪವಾಗುವಂತಹ ಹೊಸ ಪಿಂಚಣಿ ಯೋಜನೆ, ಕೆ.ಜಿ.ಐ.ಡಿ ಹಾಗ ಜ್ಯೋತಿ ಸಂಜೀವಿನಿ ಯೋಜನೆಯ ಸೌಲಭ್ಯವನ್ನು ಅಳವಡಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

**ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರಿಗೆ ಈಗಾಗಲೇ ಎನ್.ಪಿ.ಎಸ್ ಯೋಜನೆಯನ್ನು ಅಳವಡಿಸಿಕೊಂಡಿರುವುದರಿಂದ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ನೀಡುತ್ತಿರುವುದರಿಂದ ಪಿಂಚಣಿ ಯೋಜನೆ, ಕೆ.ಜಿ.ಐ.ಡಿ ಹಾಗೂ ಜ್ಯೋತಿ ಸಂಜೀವಿನಿ ಯೋಜನೆಯ ಸೌಲಭ್ಯವನ್ನು ಒದಗಿಸಲು ನಿಯಮಾವಳಿಗಳಡಿಯಲ್ಲಿ ಪರಿಶೀಲಿಸಲು ಅವಕಾಶವಿಲ್ಲವೆಂದು ಆರ್ಥಿಕ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.**

| ವಿಷಯ ಸೂಚಿ ಸಂಖ್ಯೆ – 28 | ರಿಮ್ಸ್, ರಾಯಚೂರು ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಳೀಯ ಲೆಕ್ಕಪರಿಶೋಧನೆಯನ್ನು ಮಾಡಿರುವ ಬಗ್ಗೆ ಮೆ॥ ಪಿ.ಕೆ ಸುಬ್ರಮಣ್ಯಂ & ಕಂ ನಿ ಇವರಿಗೆ ಆಡಿಟ್ ಶುಲ್ಕವನ್ನು ಪಾವತಿಸಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಕುರಿತು. |
|---|---|

ರಿಮ್ಸ್, ರಾಯಚೂರು ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಳೀಯ ಲೆಕ್ಕಪರಿಶೋಧನೆಯನ್ನು ಮೆ॥ ಪಿ.ಕೆ ಸುಬ್ರಮಣ್ಯಂ & ಕಂಪನಿ ಇವರಿಂದ ಮಾಡಿಸಲಾಗುತ್ತಿದ್ದು, ಸದರಿಯವರಿಗೆ ಆಡಿಟ್ ಶುಲ್ಕವಾಗಿ ರೂ. 1,12,100/– ಗಳನ್ನು ಚಕ್ ಮುಖಾಂತರ ಪಾವತಿಸಲಾಗಿರುತ್ತದೆ.

ಕಾರಣ ಮೆ॥ ಪಿ.ಕೆ ಸುಬ್ರಮಣ್ಯಂ & ಕಂಪನಿ ಇವರಿಗೆ ಆಡಿಟ್ ಶುಲ್ಕವಾಗಿ ರೂ. 1,12,100/– ಗಳನ್ನು ಪಾವತಿಸಿರುವ ಕುರಿತು ಆರ್ಥಿಕ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

**ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸ್ಥಳೀಯ ಮೆ॥ ಪಿ.ಕೆ ಸುಬ್ರಮಣ್ಯಂ & ಕಂಪನಿ ಇವರಿಂದ ಆಡಿಟ್‌ನ್ನು ಮಾಡಿಸಲಾಗಿದ್ದು, ಸದರಿಯವರಿಗೆ ಆಡಿಟ್ ಶುಲ್ಕವಾಗಿ ರೂ. 1,12,100/– ಗಳನ್ನು ಪಾವತಿಸಿರುವ ಕುರಿತು ಪರಿಶೀಲಿಸಿ, ಘಟನೋತ್ತರ ಅನುಮೋದನೆ ನೀಡಲಾಯಿತು.**

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| ವಿಷಯ ಸೂಚಿ ಸಂಖ್ಯೆ – 29 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಸಂಬಂಧ ಸರ್ಕಾರದಿಂದ ಬಿಡುಗಡೆ ಮಾಡಬೇಕಾಗಿರುವ ಬಾಕಿ ಅನುದಾನದ ಕುರಿತು |
|---|---|

ಸರ್ಕಾರದ ಆದೇಶ ಸಂಖ್ಯೆ ಆಕುಕ / 142 / ಎಂಎಂಇ / 2016 (1) ದಿನಾಂಕ 30.12.2016 ಆದೇಶದಲ್ಲಿ ಸರ್ಕಾರವು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ನಿರ್ಧರಿಸಿ ಈ ಕೆಳಕಂಡ ಕಾಮಗಾರಿಗಳನ್ನು ರೂ. 27,51,96,000/- ಗಳ ವೆಚ್ಚದಲ್ಲಿ ಕೈಗೊಳ್ಳುವ ಸಂಬಂಧದ ಅನಾವರ್ತಕ ವೆಚ್ಚಕ್ಕೆ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅದಕ್ಕೆ ತಗಲಿರುವ ವೆಚ್ಚ ಈ ಕೆಳಗಿನಂತಿದೆ.

**1) ಪೂರ್ಣಗೊಂಡಿರುವ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.**

| ಕ್ರ. ಸಂ | ಕಾಮಗಾರಿಗಳ ವಿವರ | ಮಂಜೂರಾತಿ ನೀಡಲಾದ ಮೊತ್ತ | ಟೆಂಡರ್ ಮೊತ್ತ | ವ್ಯತ್ಯಾಸದ ಮೊತ್ತ | ಷರಾ |
|---|---|---|---|---|---|
| 1 | ಆಸ್ಪತ್ರೆಯ ಬ್ಲಾಕ್ "ಎ" ವಸತಿ ಗೃಹಗಳ ನವೀಕರಣ | ರೂ. 23,00,000/- | ರೂ. 23,00,000/- | 0.00 | 4 (ಜಿ) ವಿನಾಯಿತಿ ಇರುವ ಮೆ॥ ಕ್ಯಾಪುಟೆಕ್ ಇವರ ಮುಖಾಂತರ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ |
| 2 | ಆಸ್ಪತ್ರೆಯ ಬ್ಲಾಕ್ "ಬಿ" ವಸತಿ ಗೃಹಗಳ ನವೀಕರಣ | ರೂ. 23,81,000/- | ರೂ. 23,81,000/- | | |
| 3 | ಆಸ್ಪತ್ರೆಯ ಬ್ಲಾಕ್ "ಸಿ" ವಸತಿ ಗೃಹಗಳ ನವೀಕರಣ | ರೂ. 24,01,000/- | ರೂ. 24,01,000/- | | |
| 4 | ಸ್ಯಾನಿಟರಿ ವರ್ಕ್ಸ್ | ರೂ. 16,71,000/- | ರೂ. 3,57,14,392/- | ರೂ. 36,11,392/- | ಮೊದಲನೇ ಹಂತದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರ್, ಆಕುಕ ಇಂ ಉಪವಿಭಾಗ, ರಾಯಚೂರು ಇವರ ಮುಖಾಂತರ ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ |
| 5 | ಒಳಚರಂಡಿ ಮತ್ತು ನೀರು ಸಂಪರ್ಕ | ರೂ. 44,32,000/- | | | |
| 6 | ರೋಡ್ಸ್ & ಡ್ರೈನೇಜ್ ಕಾರ್ಯಗಳು | ರೂ. 1,00,00,000/- | | | |
| 7 | ಬೀದಿ ದೀಪಗಳು | ರೂ. 10,00,000/- | | | |
| 8 | ರೈಸಿಂಗ್ ಪೈಪ್‌ಲೈನ್ ಅಳವಡಿಸುವುದು | ರೂ. 50,00,000/- | | | |
| 9 | ಆಸ್ಪತ್ರೆ ಕಟ್ಟಡ ದುರಸ್ಥಿ ಮತ್ತು ನಿರ್ವಹಣೆ | ರೂ. 1,00,00,000/- | | | |
| | ಒಟ್ಟು | ರೂ. 3,91,03,000/- | | | |
| 10 | ದ್ರವ ತ್ಯಾಜ್ಯ ಘಟಕಕ್ಕೆ ಒಳ ಚರಂಡಿ ಸಂಪರ್ಕ ಕಲ್ಪಿಸುವುದು | ರೂ. 5,00,000/- | ರೂ. 3,37,869/- | ರೂ. 1,62,131/- | ಸಂಸ್ಥೆಯ ಮುಖಾಂತರ ಟೆಂಡರ್ ಆಹ್ವಾನಿಸಿ ಕಾಮಗಾರಿ ಪೂರ್ಣಗೊಳಿಸಲಾಗಿರುತ್ತದೆ. |
| | ಒಟ್ಟು | ರೂ.3,96,85,000/- | ರೂ. 4,31,34,261/- | ರೂ. 34,49,261/- | |

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

## 2) ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಕಾಮಗಾರಿಗಳ ವಿವರ | ಮಂಜೂರಾತಿ ನೀಡಲಾದ ಮೊತ್ತ | ಟೆಂಡರ್ ಮೊತ್ತ | ವ್ಯತ್ಯಾಸದ ಮೊತ್ತ | ಷರಾ |
|---|---|---|---|---|---|
| 1 | ಮಾಡುಲರ್ ಓಟಿ ನಿರ್ಮಾಣ (05) | ರೂ. 1,50,00,000/- | ರೂ. 96,50,000/- + ರೂ. 40,00,000/- = ರೂ. 1,36,50,000/- | 1) ಬಾಕಿ ಉಳಿದಿರುವ ಮೊತ್ತ ರೂ. 13,50,000/- **(Excess)** | ಸಂಸ್ಥೆಯ ಮುಖಾಂತರ ಟೆಂಡರ್ ಆಹ್ವಾನಿಸಿ ಮೆ॥ ಶಿವಾನ್ ಇಂಡಿಯಾ ಇವರಿಗೆ ರೂ. 96,50,000/- ಗಳಿಗೆ ಕಾರ್ಯದೇಶವನ್ನು ನೀಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ. ಇನ್ನುಳಿದ ಕಾರ್ಯವನ್ನು ರೂ. 40,00,000/- ಗಳ ವೆಚ್ಚದಲ್ಲಿ ಸ.ಕಾ.ಅ, ಆಕುಕ ಇಂ ಉಪವಿಭಾಗ, ರಾಯಚೂರು ಇವರಿಂದ ಕೈಗೊಳ್ಳಲಾಗಿರುತ್ತದೆ |
| | ಒಟ್ಟು | ರೂ. 1,50,00,000/- | | | |
| 2 | ಲ್ಯಾಂಡ್ ಸ್ಕೇಪಿಂಗ್ | ರೂ.1,10,00,000/- | ರೂ. 2,34,80,000/- | 2) ಬಾಕಿ ಉಳಿದಿರುವ ಮೊತ್ತ ರೂ. 57,00,000/- **(Excess)** | ಸ.ಕಾ.ಅ, ಆಕುಕ ಇಂ ಉಪವಿಭಾಗ, ರಾಯಚೂರು ಇವರಿಂದ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 3 | ವಾರ್ಡ್ ನವೀಕರಣ | ರೂ. 20,00,000/- | | | |
| 4 | ಎಸಿ ಫೀಟ್ಟಿಂಗ್ ಮತ್ತು ಎಲೆಕ್ಟ್ರೀಕಲ್ ಕಾರ್ಯಗಳು | ರೂ. 6,80,000/- | | | |
| 5 | ಕಾನ್ಫರೆನ್ಸ್ ಹಾಲ್ (ಅಕೌಸ್ಟಿಕ್ ಮತ್ತು ಇತರ ಕಾರ್ಯಗಳು ಸೇರಿ) | ರೂ. 50,00,000/- | | | |
| 6 | ಫ್ಯಾನ್ ಮತ್ತು ವಿದ್ಯುತ್ ಸಾಮಾಗ್ರಿಗಳ ಖರೀದಿ | ರೂ. 5,00,000/- | | | |
| 7 | ಐಸಿಯು | ರೂ. 1,00,00,000/- | | | 02 ಐಸಿಯುಗಳನ್ನು ಮೆ॥ ಕ್ಯಾಪುಟೆಕ್ ಮುಖಾಂತರ ರೂ. 43,40,000/- ಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ಹಾಗು ಇನ್ನುಳಿದ ಕಾರ್ಯವನ್ನು ರೂ. 56,60,000/- ಗಳ ವೆಚ್ಚದಲ್ಲಿ ಸ.ಕಾ.ಅ. ಆಕುಕ ಇಂ ಉಪವಿಭಾಗ, ರಾಯಚೂರು ಇವರಿಂದ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| | ಒಟ್ಟು | ರೂ. 2,91,80,000/- | | | |
| 8 | ಓಪೆಕ್ ಆಸ್ಪತ್ರೆಯ ಆವರಣದಲ್ಲಿರುವ ಎಲ್ಲಾ ವಸತಿ ಗೃಹಗಳಿಗೆ ಮೆಶ್ ಅಳವಡಿಸುವುದು | - | ರೂ. 39,88,000/- | 3) ರೂ. 39,88,000/- | ಸ.ಕಾ.ಅ, ಆಕುಕ ಇಂ ಉಪವಿಭಾಗ, ರಾಯಚೂರು ಇವರಿಂದ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| | ಒಟ್ಟು | (ರೂ. 1,50,00,000/- + ರೂ. 2,91,80,000/- = ರೂ. 4,41,80,000/- | ರೂ. 1,36,50,000/- (+) ರೂ. 2,34,80,000/- (+) ರೂ. 39,88,000/- = ರೂ. 4,11,18,000/- | ರೂ. 13,50,000/- (+) ರೂ. 7,00,000/- (-) ರೂ. 39,88,000/- = ರೂ.30,62,000/- | |

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

## 2 ಎ) ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಕಾಮಗಾರಿಗಳ ವಿವರ | ಮಂಜೂರಾತಿ ನೀಡಲಾದ ಮೊತ್ತ | ಟೆಂಡರ್ ಮೊತ್ತ | ವ್ಯತ್ಯಾಸದ ಮೊತ್ತ | ಷರಾ |
|---|---|---|---|---|---|
| 1 | ನರ್ಸಿಂಗ್ ವಸತಿ ಗೃಹಗಳ ನಿರ್ಮಾಣ | ರೂ. 8,30,31,000/- | ರೂ. 9,29,92,670/- | ರೂ. 99,61,670/- | ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರ್, ಆಕುಕ ಇಂ ಉಪವಿಭಾಗ, ರಾಯಚೂರು ಇವರ ಮುಖಾಂತರ ಟೆಂಡರ್ ಆಹ್ವಾನಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| ಒಟ್ಟು | | ರೂ. 8,30,31,000/- | ರೂ. 9,29,92,670/- | ರೂ. 99,61,670/- | |

## 3) ಇನ್ನು ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ವಿವರ

| ಕ್ರ.ಸಂ | ಕಾಮಗಾರಿಗಳ ವಿವರ | ಮಂಜೂರಾತಿ ನೀಡಲಾದ ಮೊತ್ತ | ಷರಾ |
|---|---|---|---|
| 1 | ಲಿಫ್ಟ್ ಅಳವಡಿಸುವುದು | ರೂ. 2,00,00,000/- | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅಂಬ್ಯೂಲೆನ್ಸ್ ವಾಹನ, ಪೀಠೋಪಕರಣ, ಉಪಕರಣ ಹಾಗೂ ಬೆಡ್ಸ್ ಮತ್ತು ಲಿನನ್ ಸಾಮಾಗ್ರಿಗಳನ್ನು ಖರೀದಿಸ ಬೇಕಾಗಿರುತ್ತದೆ. |
| 2 | 150 ಕೆವಿಎ ಜನರೇಟರ ಖರೀದಿ | ರೂ. 70,00,000/- | |
| 3 | ಉಪಕರಣಗಳ ಖರೀದಿ | ರೂ. 7,28,00,000/- | |
| 4 | 02 ಅಂಬ್ಯೂಲೆನ್ಸ್‌ಗಳ ಖರೀದಿ | ರೂ. 40,00,000/- | |
| 5 | ಪೀಠೋಪಕರಣಗಳ ಖರೀದಿ | ರೂ. 25,00,000/- | |
| 6 | ಬೆಡ್ಸ್ ಮತ್ತು ಲಿನನ್ ಖರೀದಿ | ರೂ. 20,00,000/- | |
| ಒಟ್ಟು | | ರೂ. 10,83,00,000/- | |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು 2ನೇ ಹಂತದಲ್ಲಿ ಮೇಲ್ದರ್ಜೆಗೇರಿಸಲು ಅವಶ್ಯವಿರುವ ಎಲ್ಲಾ ಕಾಮಗಾರಿಗಳನ್ನು ಸರ್ಕಾರದ ನಿರ್ದೇಶನದಂತೆ ನಿಯಮಾನುಸಾರ ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜೀನಿಯರಿಂಗ್ ಉಪವಿಭಾಗ, ರಾಯಚೂರು ಇವರ ಮುಖಾಂತರ ಕೈಗೊಳ್ಳಲಾಗಿರುತ್ತದೆ. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರವು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಅದರ ವಿವರ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ | ವರ್ಷ | ಲೆಕ್ಕಶೀರ್ಷಿಕೆ | ಬಿಡುಗಡೆ ಮಾಡಲಾದ ಅನುದಾನ |
|---|---|---|---|---|
| 1 | ಸಂಖ್ಯೆ. ಆಕುಕ / 142 / ಎಂಎಂಇ / 2016 (2) ದಿ.: 30.12.2016 | 2016-17 | 2201-01-110-2-37-102 | ರೂ. 8,25,00,000/- |
| 2 | ಸಂಖ್ಯೆ. ಆಕುಕ / 142 / ಎಂಎಂಇ / 2016 ದಿ. 21.02.202017 | | | ರೂ. 2,75,00,000/- |
| 3 | ಸಂಖ್ಯೆ. ಆಕುಕ / 136 / ಎಂಎಸ್ಎಫ್ / 2017 ದಿ. 28.04.2017 | 2017-18 | 2201-01-110-2-37-102 | ರೂ. 1,03,25,000/- |
| 4 | ಸಂಖ್ಯೆ. ಆಕುಕ / 136 / ಎಂಎಸ್ಎಫ್ / 2017 ದಿ. 01.07.2017 | | | ರೂ. 1,03,25,000/- |

(ಶ್್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| | | | | |
|---|---|---|---|---|
| 5 | ಸಂಖ್ಯೆ. ಆಕುಕ / 136 / ಎಂಎಸ್ಎಫ್ / 2017 ದಿ. 09.10.2017 | | | ರೂ. 1,03,25,000/- |
| 6 | ಸಂಖ್ಯೆ. ಆಕುಕ / 136 / ಎಂಎಸ್ಎಫ್ / 2017 ದಿ. 20.01.2018 | | | ರೂ. 1,03,25,000/- |
| 7 | ಸಂಖ್ಯೆ. ಆಕುಕ / 126 / ಎಂಎಸ್ಎಫ್ / 2018 ದಿ. 09.04.2018 | 2018-19 | 2201-01-110-2-37-102 | ರೂ. 1,00,00,000/- |
| 8 | ಸಂಖ್ಯೆ. ಆಕುಕ / 126 / ಎಂಎಸ್ಎಫ್ / 2018 ದಿ. 28.07.2018 | | | ರೂ. 1,00,00,000/- |
| 9 | ಸಂಖ್ಯೆ. ಆಕುಕ / 126 / ಎಂಎಸ್ಎಫ್ / 2018 ದಿ. 15.10.2018 | | | ರೂ. 1,00,00,000/- |
| 10 | ಸಂಖ್ಯೆ. ಆಕುಕ / 126 / ಎಂಎಸ್ಎಫ್ / 2018 ದಿ. 28.01.2019 | | | ರೂ. 1,00,00,000/- |
| ಒಟ್ಟು ಬಿಡುಗಡೆಯಾದ ಮೊತ್ತ | | | | ರೂ. 19,13,00,000/- |

ಸರ್ಕಾರವು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾದ ಮೊತ್ತ ರೂ. 27,51,96,000/- ಗಳ ಅನುದಾನ ಪೈಕಿ ಈವರೆಗೆ ರೂ. 19,13,00,000/- ಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

ರೂ. 27,51,96,000/- ಗಳ ಅನುದಾನದ ಪೈಕಿ ರೂ. 16,68,96,000/- ಗಳ ಅಂದಾಜು ಮೊತ್ತಕ್ಕೆ ಕಾಮಗಾರಿಯನ್ನು ಕೈಗೆತ್ತಿಗೊಂಡಿದ್ದು, ಇದಕ್ಕೆ ವಾಸ್ತವವಾಗಿ ರೂ. 17,72,44,931/- ಗಳು ವೆಚ್ಚವಾಗಿರುತ್ತದೆ. ಅಂದರೆ ಅಂದಾಜು ಮೊತ್ತಕ್ಕಿಂತ ರೂ. 1,03,48,931/- ಗಳು ಹೆಚ್ಚಾಗಿ ವೆಚ್ಚವಾಗಿರುತ್ತದೆ. ಈ ಹೆಚ್ಚುವರಿಯಾಗಿ ವೆಚ್ಚವಾಗಿರುವ ರೂ. 1,03,48,931/- ಗಳನ್ನು ಲಭ್ಯವಿರುವ ಅನುದಾನದಲ್ಲಿ ಭರಿಸಲಾಗಿರುತ್ತದೆ. ಆದರೆ ಇದರಿಂದಾಗಿ ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೇರಿಸಲು ಬಿಡುಗಡೆ ಮಾಡಬೇಕಾಗಿರುವ ಬಾಕಿ ಅನುದಾನದ ಕುರಿತು ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರವು ಈ ಹಿಂದೆ ಕೈಗೊಂಡಿರುವ ಕಾಮಗಾರಿಗಳಿಗೆ ಮತ್ತು ಮುಂದೆ ಕೈಗೊಳ್ಳಬೇಕಾಗಿರುವ ಕಾಮಗಾರಿಗಳಿಗೆ ಆರ್ಥಿಕ ಸಮಿತಿ / ಆಡಳಿತ ಸಮಿತಿ ಅನುಮೋದನೆ ಪಡೆದಿರುವ ಕುರಿತು ಮಾಹಿತಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತದೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಬಾಕಿ ಉಳಿದಿರುವ ಕಾಮಗಾರಿಗಳನ್ನು ಸರ್ಕಾರದ ನಿರ್ದೇಶನದಂತೆ ನಿರ್ವಹಿಸಲು ಅವಶ್ಯವಿರುವ ಒಟ್ಟು ರೂ. 9,42,44,931/- ಗಳ ಅನುದಾನವನ್ನು ಲೆಕ್ಕಶೀರ್ಷಿಕೆ 2210-01-110-2-37-102 ಅಡಿಯಲ್ಲಿ ಜರೂರಾಗಿ ಬಿಡುಗಡೆ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ಇಲ್ಲಿಯವರೆಗೆ ವೆಚ್ಚವಾದ ಅನುದಾನದ ಕುರಿತು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ಪರಿವೀಕ್ಷಣೆ ನಡೆಸಿದ ನಂತರ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.**

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| ವಿಷಯ ಸೂಚಿ ಸಂಖ್ಯೆ – 30 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸುತ್ತಮುತ್ತ ಸಿಸಿ ಚರಂಡಿಗಳನ್ನು ನಿರ್ಮಾಣ ಮಾಡಲು ಲಿಫ್ಟ್‌ಗಳಿಗೆ ನಿಗಧಿಪಡಿಸಿದ ಅನುದಾನ ಬಳಕೆ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |
|---|---|

ಸರ್ಕಾರದ ಆದೇಶ ಸಂಖ್ಯೆ ಆಕುಕ / 142 / ಎಂಎಂಇ / 2016 (1) ದಿನಾಂಕ 30.12.2016 ರನ್ವಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಎರಡನೇ ಹಂತದಲ್ಲಿ ಮೇಲ್ದರ್ಜೆಗೇರಿಸಲು ಅವಶ್ಯವಿರುವ ಸಿವಿಲ್ ಕಾಮಗಾರಿಗಳನ್ನು ಹಂತಹಂತವಾಗಿ ತಮ್ಮ ಇಲಾಖೆಯ ಮುಖಾಂತರ ಕೈಗೊಳ್ಳಲಾಗುತ್ತಿದೆ. ಅದರಂತೆ ಸರ್ಕಾರದ ಆದೇಶದಲ್ಲಿ ಓಪೆಕ್ ಆಸ್ಪತ್ರೆಯಲ್ಲಿ ಲಿಫ್ಟ್‌ಗಳನ್ನು ಅಳವಡಿಸುವ ಸಂಬಂಧ ರೂ. 200.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ ಆದರೆ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಓಪೆಕ್ ಆಸ್ಪತ್ರೆಯಲ್ಲಿ ಲಿಫ್ಟ್‌ಗಳನ್ನು ದುರಸ್ಥಿಗೊಳಿಸಬಹುದಾಗಿರುವುದರಿಂದ ಮತ್ತು ರೋಗಿಗಳನ್ನು ಸ್ಥಳಾಂತರಿಸಲು ರ್‍ಯಾಂಪ್ ವ್ಯವಸ್ಥೆ ಇರುವುದರಿಂದ ಹೊಸದಾಗಿ ಲಿಫ್ಟ್‌ಗಳನ್ನು ಅಳವಡಿಸುವುದು ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿ ಸದರಿ ಮೊತ್ತವನ್ನು ಆಸ್ಪತ್ರೆ ಹಾಗೂ ಆಸ್ಪತ್ರೆಯ ಆವರಣದಲ್ಲಿರುವ ವಸತಿ ಗೃಹಗಳಿಗೆ ಸಿಸಿ ಚರಂಡಿಗಳನ್ನು ನಿರ್ಮಾಣ ಮಾಡವ ಸಂಬಂಧ ಬಳಕೆ ಮಾಡಿ ಕಾಮಗಾರಿಯನ್ನು ಕೈಗೊಳ್ಳುವಂತೆ ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ / 142 / ಎಂಎಂಇ / 2016 (1) ದಿನಾಂಕ 30.12.2016 ರನ್ವಯ ಲಿಫ್ಟ್‌ಗಳ ಅಳವಡಿಕೆಗೆ ನಿಗದಿಪಡಿಸಲಾಗಿರುವ ರೂ. 200.00 ಲಕ್ಷಗಳ ಅನುದಾನವನ್ನು ಓಪೆಕ್ ಆಸ್ಪತ್ರೆ ಮತ್ತು ಓಪೆಕ್ ಆಸ್ಪತ್ರೆಯ ಆವರಣದಲ್ಲಿರುವ ವಸತಿ ಸಮುಚ್ಚಯಗಳ ಸುತ್ತಮುತ್ತ ನೀರು ಸರಾಗವಾಗಿ ಹರಿದು ಹೋಗುವಂತೆ ಸಿಸಿ ಚರಂಡಿಗಳನ್ನು ನಿರ್ಮಾಣ ಮಾಡುವುದು, ಸಿಸಿ ಚರಂಡಿಗಳಿಗೆ ಸ್ಲ್ಯಾಬ್‌ಗಳನ್ನು ಅಳವಡಿಸುವುದು ಮತ್ತು ವಸತಿ ಸಮುಚ್ಚಯಗಳ ಸ್ಯಾನಿಟರಿ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಬಳಕೆ ಮಾಡುವಂತೆ ಹಾಗೂ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಅಲ್ಪಾವಧಿ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರನ್ನು ಕೋರಲಾಗಿತ್ತು ಸದರಿಯವರು ಓಪೆಕ್ ಆಸ್ಪತ್ರೆ ಮತ್ತು ಓಪೆಕ್ ಆಸ್ಪತ್ರೆಯ ಆವರಣದಲ್ಲಿರುವ ವಸತಿ ಸಮುಚ್ಚಯಗಳ ಸುತ್ತಮುತ್ತ ಸಿಸಿ ಚರಂಡಿಗಳನ್ನು ನಿರ್ಮಾಣ ಮಾಡುವ ಸಂಬಂಧ ರೂ. 200.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ, ಸದರಿ ಅಂದಾಜು ಪಟ್ಟಿಗೆ ಮೇಲ್ ರುಜು ಮಾಡಿ ಹಿಂದುರುಗಿಸುವಂತೆ ಕೋರಿ, ಅಂದಾಜು ಪಟ್ಟಿಯನ್ನು ದಿನಾಂಕ 28.01.2019 ರಂದು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರು ಕೋರಿದಂತೆ, ರೂ. 200.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲ್ ರುಜು ಮಾಡಿ, ಸದರಿ ಕಾಮಗಾರಿಯನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವಂತೆ ಕೋರಲಾಗಿದ್ದು, ಮುಖ್ಯ ಇಂಜಿನಿಯರ್, ಆಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಇವರು ಬದಲಿ ಕಾಮಗಾರಿಯ ಪ್ರಸ್ತಾವನೆಗೆ ಸರ್ಕಾರದಿಂದ ತಿದ್ದುಪಡಿ ಅನುಮೋದನೆ ಪಡೆಯುವುದು ಅವಶ್ಯಕತೆ ಇರುವುದರಿಂದ, ಲಿಫ್ಟ್‌ಗಳಿಗೆ ನಿಗದಿಪಡಿಸಿರುವ ರೂ. 200.00 ಲಕ್ಷಗಳ ಅನುದಾನವನ್ನು ಓಪೆಕ್ ಆಸ್ಪತ್ರೆ ಹಾಗೂ ಆಸ್ಪತ್ರೆಯ ಆವರಣದಲ್ಲಿನ ವಸತಿ ಗೃಹಗಳ ಸುತ್ತಮುತ್ತ ಸಿಸಿ ಚರಂಡಿಗಳನ್ನು ನಿರ್ಮಾಣ ಮಾಡಲು ಸರ್ಕಾರದಿಂದ ಅನುಮೋದನೆ ಪಡೆದು ಸಲ್ಲಿಸುವಂತೆ ಕೋರಿರುವುದರಿಂದ, ಸರ್ಕಾರದಿಂದ ಅನುಮೋದನೆ ಪಡೆದು ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿ ಸರ್ಕಾರವು ಸದರಿ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಮಿತಿ / ಆಡಳಿತ ಮಂಡಳಿಯಿಂದ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ ಆಕುಕ / 41 / ಎಂಎಂಇ / 2019 ದಿನಾಂಕ 10.05.2019 ರನ್ವಯ ಸೂಚಿಸಲಾಗಿರುತ್ತದೆ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

ಕಾರಣ ಸರ್ಕಾರದ ಆದೇಶ ಸಂಖ್ಯೆ. ಆಕುಕ / 142 / ಎಂಎಂಇ / 2016 (1) ದಿನಾಂಕ 30.12.2016 ರನ್ವಯ ಲಿಫ್ಟ್‌ಗಳ ಅಳವಡಿಕೆಗೆ ನಿಗದಿಪಡಿಸಲಾಗಿರುವ ರೂ. 200.00 ಲಕ್ಷಗಳ ಅನುದಾನವನ್ನು ವಿಶೇಷಾಧಿಕಾರಿಗಳ ಕೋರಿಕೆ ಮೇರೆಗೆ ಓಪೆಕ್ ಆಸ್ಪತ್ರೆ ಮತ್ತು ಓಪೆಕ್ ಆಸ್ಪತ್ರೆಯ ಆವರಣದಲ್ಲಿರುವ ವಸತಿ ಸಮುಚ್ಚಯಗಳ ಸುತ್ತಮುತ್ತ ನೀರು ಸರಾಗವಾಗಿ ಹರಿದು ಹೋಗುವಂತೆ ಸಿಸಿ ಚರಂಡಿಗಳನ್ನು ನಿಯಮಾನುಸಾರ ನಿರ್ಮಾಣ ಮಾಡುವ ಸಂಬಂಧ ರೂ. 200.00 ಲಕ್ಷಗಳ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

**ಸರ್ಕಾರದ ಆದೇಶ ಸಂಖ್ಯೆ. ಆಕುಕ / 142 / ಎಂಎಂಇ / 2016 (1) ದಿನಾಂಕ 30.12.2016 ರನ್ವಯ ಲಿಫ್ಟ್‌ಗಳ ಅಳವಡಿಕೆಗೆ ನಿಗದಿಪಡಿಸಲಾಗಿರುವ ರೂ. 200.00 ಲಕ್ಷಗಳ ಅನುದಾನವನ್ನು ವಿಶೇಷಾಧಿಕಾರಿಗಳ ಕೋರಿಕೆ ಮೇರೆಗೆ ಓಪೆಕ್ ಆಸ್ಪತ್ರೆ ಮತ್ತು ಓಪೆಕ್ ಆಸ್ಪತ್ರೆಯ ಆವರಣದಲ್ಲಿರುವ ವಸತಿ ಸಮುಚ್ಚಯಗಳ ಸುತ್ತಮುತ್ತ ನೀರು ಸರಾಗವಾಗಿ ಹರಿದು ಹೋಗುವಂತೆ ಸಿಸಿ ಚರಂಡಿಗಳನ್ನು ನಿಯಮಾನುಸಾರ ನಿರ್ಮಾಣ ಮಾಡುವ ಸಂಬಂಧ ರೂ. 10.00 ಲಕ್ಷಗಳ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 31 | ರಾಜೀವ್‌ಗಾಂಧಿ ಸೂಪರ್ ಸ್ಪೇಷಾಲಿಟಿ (ಓಪೆಕ್) ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ 2020–21ನೇ ಸಾಲಿಗಾಗಿ ಅವಶ್ಯವಿರುವ ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಬಗ್ಗೆ. |

ವಿಶೇಷಾಧಿಕಾರಿಗಳು, ರಾಜೀವ್‌ಗಾಂಧಿ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ, ರಾಯಚೂರು ಇವರು ದಿನಾಂಕ 14.07.2020ರ ಪತ್ರದಲ್ಲಿ ರಾಗಾಸೂಸ್ಪೇ (ಓಪೆಕ್) ಆಸ್ಪತ್ರೆಯ ಡಯಾಲಿಸಿಸ್ ವಿಭಾಗಗಕ್ಕೆ 2020–21ನೇ ಸಾಲಿಗಾಗಿ ಅವಶ್ಯವಿರುವ ರಸಾಯನಿಕ ಮತ್ತು ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಪೂರೈಸುವಂತೆ ಬೇಡಿಕೆ ಪತ್ರದಲ್ಲಿ ಸಲ್ಲಿಸಿರುತ್ತಾರೆ. ಸದರಿ ಡಯಾಲಿಸಿಸ್ ರಸಾಯನಿಕ ಮತ್ತು ಪರಿಕರಗಳನ್ನು ಖರೀದಿಸಲು ಅಂದಾಜು 74,88,950/–ಗಳು ಆಗುವ ಸಾಧ್ಯತೆಯಿರುತ್ತದೆ. ಸರ್ಕಾರವು 2020–21 ನೇ ಸಾಲಿಗೆ ನಿಗದಿ ಪಡಿಸಿದೆ ಲೆಕ್ಕ ಶೀರ್ಷಿಕೆ ಸಂಖ್ಯೆ. 2210–01–110–2–37–103 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಅನುದಾನವು ಲಭ್ಯವಿರುತ್ತದೆ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

ಕಾರಣ ರಾಜೀವ್‌ಗಾಂಧಿ ಸೂಪರ್‌ಸ್ಪೇಷಾಲಿಟಿ (ಓಪೆಕ್) ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ 2020–21ನೇ ಸಾಲಿಗಾಗಿ ಅವಶ್ಯವಿರುವ ರಸಾಯನಿಕ ಮತ್ತು ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಟೆಂಡರ್ ಆಹ್ವಾನಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :–</u>

**ರಾಜೀವ್‌ಗಾಂಧಿ ಸೂಪರ್ ಸ್ಪೇಷಾಲಿಟಿ (ಓಪೆಕ್) ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ 2020–21ನೇ ಸಾಲಿಗಾಗಿ ಅವಶ್ಯವಿರುವ ರಸಾಯನಿಕ ಮತ್ತು ಪರಿಕರಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಹಾಗು ಇದಕ್ಕೆ ತಗುಲುವ ರೂ.74.00 ಲಕ್ಷ ವೆಚ್ಚವನ್ನು ಲೆಕ್ಕ ಶಿರ್ಷಿಕೆ ಸಂಖ್ಯೆ 2210–01–110–2–37–103 ಅಡಿಯಲ್ಲಿ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.**

| ವಿಷಯ ಸೂಚಿ ಸಂಖ್ಯೆ – 32 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರಗೆ ಅವಶ್ಯವಿರುವ ಔಷಧಿಗಳು, ರಸಾಯನಿಕಗಳು, ಸಲಕರಣೆಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು |
|---|---|

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2020–21 ನೇ ಸಾಲಿಗೆ ಇಂಜೆಕ್ಸನ್, ಮಾತ್ರೆಗಳು, ಸರ್ಜಿಕಲ್ ಐಟಂಗಳ ಅವಶ್ಯಕತೆಯಿದ್ದು, ಸದರಿ ಔಷಧಿಗಳನ್ನು ಸರಬರಾಜು ಮಾಡಲು ಬೇಡಿಕೆ ಪತ್ರವನ್ನು ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ರಿಮ್ಸ್ ಕಾರ್ಯಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮಾತ್ರೆಗಳನ್ನು ಖರೀದಿಸಲು ರೂ. 3,41,205/–, ಇಂಜೆಕ್ಷನ್‌ಗಳನ್ನು ಖರೀದಿಸಲು ರೂ. 34,79,859/– & ಸರ್ಜಿಕಲ್ ಐಟಂಗಳನ್ನು ಖರೀದಿಸಲು ರೂ. 2,49,98,314/– ಗಳು ಸೇರಿ ಒಟ್ಟು 2,88,19,378/– ಗಳು ವೆಚ್ಚವಾಗುವ ಸಾಧ್ಯತೆಯಿರುತ್ತದೆ.

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಲೆಕ್ಕಶಿರ್ಷಿಕೆ 2210–01–110–2–37–103 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಅನುದಾನ ಲಭ್ಯವಿರುತ್ತದೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರಗೆ ಅವಶ್ಯವಿರುವ ಔಷಧಿಗಳು, ರಸಾಯನಿಕಗಳು, ಸಲಕರಣೆಗಳನ್ನು ನಿಯಮಾನುಸಾರ ಖರೀದಿಸಲು ಟೆಂಡರ್ ಆಹ್ವಾನಿಸುವ ಬಗ್ಗೆ ಹಾಗೂ ಈ ವೆಚ್ಚವನ್ನು ಲೆಕ್ಕಶಿರ್ಷಿಕೆ 2210–01–110–2–37–103 ಅಡಿಯಲ್ಲಿ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

**ಸಭೆಯ ತೀರ್ಮಾನ :-**

**ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ರೂ. 3,41,205/-ಗಳ ವೆಚ್ಚದಲ್ಲಿ ಮಾತ್ರೆಗಳನ್ನು, ರೂ. 34,79,859/- ಗಳ ವೆಚ್ಚದಲ್ಲಿ ಇಂಜೆಕ್ಷನ್‌ಗಳನ್ನು ಹಾಗು ರೂ. 2,49,98,314/- ಗಳ ವೆಚ್ಚದಲ್ಲಿ ಸರ್ಜಿಕಲ್ ಐಟಂಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ರೂ. 2.80 ಕೋಟಿಗಳ ವೆಚ್ಚದಲ್ಲಿ ಖರೀದಿಸಲು ಹಾಗೂ ಈ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-01-110-2-37-103 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 33 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪುನಶ್ಚೇತನಗೊಳಿಸಲು ಅವಶ್ಯವಿರುವ ವಿವಿಧ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡುವ ಕುರಿತು. |

ದಿನಾಂಕ 13.06.2020 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿ ನೀಡಿದ ಸಮಯದಲ್ಲಿ ಆಸ್ಪತ್ರೆಯ ಕಟ್ಟಡ ಹಾಗು ಆಸ್ಪತ್ರೆಯ ಆವರಣವನ್ನು ಪರಿಶೀಲಿಸಿ, ಆಸ್ಪತ್ರೆಯನ್ನು ಪುನಶ್ಚೇತನಗೊಳಿಸಲುಅವಶ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ನಿರ್ದೇಶನದ ಮೇರೆಗೆ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಆಸ್ಪತ್ರೆಯನ್ನು ಪುನಶ್ಚೇತನಗೊಳಿಸಲು ಅವಶ್ಯವಿರುವ ಕಾಮಗಾರಿಗಳು ಹಾಗೂ ಮಾನವ ಸಂಪನ್ಮೂಲದ ಕುರಿತು ಸಲ್ಲಬಹುದಾದ ರೂ. 28,11,69,000/- ವೆಚ್ಚದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಆದರೆ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಲಭ್ಯವಿರುವುದಿಲ್ಲ.

| ಕ್ರಮ ಸಂಖ್ಯೆ | ಕಾಮಗಾರಿಯ ವಿವರ | ಕಾಮಗಾರಿಗೆ ಸಲ್ಲುವ ಅಂದಾಜು ಮೊತ್ತ |
|---|---|---|
| 1 | ಡಯಾಲಿಸಿಸ್ ಘಟಕವನ್ನು ಉನ್ನತೀಕರಿಸುವುದು | ರೂ. 4,16,02,000/- |
| 2 | ತುರ್ತು ನಿಘಾ ಘಟಕವನ್ನು ಪ್ರಾರಂಭಿಸುವುದು | ರೂ. 2,01,67,000/- |
| 3 | ಆಸ್ಪತ್ರೆ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸುವುದು | ರೂ. 77,00,000/- |
| 4 | ಆಸ್ಪತ್ರೆಯನ್ನು ಪುನಶ್ಚೇತನಗೊಳಿಸಲು ಅವಶ್ಯವಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವುದು | ರೂ. 14,00,00,000/- |
| 5 | ಮಾನವ ಸಂಪನ್ಮೂಲ ಒದಗಿಸುವುದು (ವಾರ್ಷಿಕ ಆವರ್ತಕ ವೆಚ್ಚ) | ರೂ. 13,45,000/- |
| 6 | ಟ್ರಾಮಾಕೇರ್ ಸೆಂಟರ್‌ನ್ನು ಪ್ರಾರಂಭಿಸುವುದು | ರೂ. 7,03,55,000/- |
| | ಒಟ್ಟು ಮೊತ್ತ | ರೂ. 28,11,69,000/- |

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

ಕಾರಣ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರು ನಿರ್ದೇಶನದಂತೆ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪುನಶ್ಚೇತನಗೊಳಿಸಲು ಅವಶ್ಯವಿರುವ ಪೀಠೋಪಕರಣ, ಉಪಕರಣಗಳನ್ನು ಖರೀದಿಸಲು ಹಾಗು ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯವಿರುವ ರೂ. 28,11,69,000/- ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಲೆಕ್ಕ ಶೀರ್ಷಿಕೆ 2210-01-110-2-37-102 ಅಡಿಯಲ್ಲಿ ರೂ. 28,11,69,000/- ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

**ಸಭೆಯ ತೀರ್ಮಾನ :-**

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪುನಶ್ಚೇತನಗೊಳಿಸುವ ಸಂಬಂಧ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿದ್ದು, ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ನೀಡುವ ನಿರ್ದೇಶನದ ಮೇರೆಗೆ ಮುಂದಿನ ಕ್ರಮ ಜರುಗಿಸಲು ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು.**

| | |
|---|---|
| ವಿಷಯ ಸೂಚಿ ಸಂಖ್ಯೆ – 34 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಹುದ್ದೆಗಳನ್ನು ಸೃಜಿಸಲು ಅನುಮೋದನೆ ನೀಡುವ ಕುರಿತು. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪ್ರತಿ ನಿತ್ಯ ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ, ಓಪೆಕ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆಯನ್ನು ಪ್ರಾರಂಭಿಸಲು ತುರ್ತು ನಿಘಾ ಘಟಕವನ್ನು ಪ್ರಾರಂಭಿಸಲು ಕ್ರಮವಹಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಓಪೆಕ್ ಆಸ್ಪತ್ರೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯರಂಭ ಮಾಡಿರುವುದರಿಂದ, ಮತ್ತು ಸದರಿ ಹುದ್ದೆಗಳು ಆಸ್ಪತ್ರೆಗೆ ಈವರೆಗೆ ಮಂಜೂರು ಆಗಿರದ ಕಾರಣ ಈ ಕೆಳಕಂಡ ಹುದ್ದೆಗಳು ಆಸ್ಪತ್ರೆಗೆ ಅತಿ ಅವಶ್ಯಕವಾಗಿದ್ದು, ಸದರಿ ಹುದ್ದೆಗಳನ್ನು ಸೃಜಿಸಿಕೊಳ್ಳಲು ಅನುಮತಿಯನ್ನು ನೀಡುವಂತೆ ಕೋರಿ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ವೇತನದ ವಿವರ | ಅವಶ್ಯವಿರುವ ಹುದ್ದೆಗಳ ಸಂಖ್ಯೆ | ವಾರ್ಷಿಕ ಅಂದಾಜು ವೆಚ್ಚ |
|---|---|---|---|---|
| 01 | ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳು | 52650-97100 | 06 | ರೂ. 45,21,000/- |
| 02 | ಡ್ಯೂಟಿ ಮೆಡಿಕಲ್ ಆಫಿಸರ್ | 52650-97100 | 06 | ರೂ. 45,21,000/- |
| 03 | ಕ್ಯಾಥ್ ಲ್ಯಾಬ್ ಟೆಕ್ನಿಷಿಯನ್ | 33450-62600 | 02 | ರೂ. 9,58,000/- |

**ಸಭೆಯ ತೀರ್ಮಾನ :-**

**ಸದರಿ ಪ್ರಸ್ತಾವನೆಯನ್ನು ಆರ್ಥಿಕ ಸಮಿತಿ ಸಭೆಯು ತಿರಸ್ಕರಿಸಿತು.**

(ಶ್ರೀ ವಿಜಯ ಶಂಕರ್),
ಆರ್ಥಿಕ ಸಲಹೆಗಾರರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ.ಬಸವರಾಜ್ ವಿ. ಪೀರಾಪುರ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ
ಸಂಸ್ಥೆ, ರಾಯಚೂರು

| ವಿಷಯ ಸೂಚಿ ಸಂಖ್ಯೆ – 35 | ಮೆ॥ ಆರ್.ವಿ ಜಾನ್ (ರಾಜಣ್ಣ ಸೆಕ್ಯೂರಿಟಿ ಇಂಟಲಿಜೆಂನ್ಸ್ ಸರ್ವಿಸ್), ರಾಯಚೂರು ಇವರ ಸೇವೆಯನ್ನು ಮುಂದುವರೆಸಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ವಚ್ಚತೆಯ ನಿಮಿತ್ತ ಸ್ವಚ್ಚತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ನಿಯಮಾನುಸಾರ ಟೆಂಡರ್ ಆಹ್ವಾಣಿಸಿ ಮೆ॥ ಆರ್.ವಿ ಜಾನ್ (ರಾಜಣ್ಣ ಸೆಕ್ಯೂರಿಟಿ ಇಂಟಲಿಜೆಂನ್ಸ್ ಸರ್ವಿಸ್), ರಾಯಚೂರು ಇವರಿಗೆ ದಿನಾಂಕ 27.09.2017 ರಿಂದ 26.09.2018ರವರೆಗೆ ಆದೇಶವನ್ನು ನೀಡಲಾಗಿರುತ್ತದೆ. ಸದರಿಯವರ ಅವಧಿಯು ಪೂರ್ಣಗೊಂಡ ನಂತರ ಸ್ವಚ್ಚತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿ ಟೆಂಡರ್‌ನಲ್ಲಿ ಭಾಗವಹಿಸಿದ ಟೆಂಡರ್‌ದಾರರು ನ್ಯಾಯಲಯಕ್ಕೆ ದೂರು ದಾಖಲಿಸಿದ ಹಿನ್ನಲೆಯಲ್ಲಿ ನ್ಯಾಯಲಯದ ಪ್ರಕರಣ ಇತ್ಯರ್ಥವಾಗುವವರೆಗೆ ಮೆ॥ ಆರ್.ವಿ ಜಾನ್ (ರಾಜಣ್ಣ ಸೆಕ್ಯೂರಿಟಿ ಇಂಟಲಿಜೆಂನ್ಸ್ ಸರ್ವಿಸ್), ರಾಯಚೂರು ಇವರ ಸೇವೆಯನ್ನು ಮುಂದುವರೆಸಲಾಗಿದೆ. ಸದರಿ ಪ್ರಕರಣವು ದಿನಾಂಕ 29.07.2020 ರಂದು ದೂರು ದಾಖಲಿಸಿದ್ದ ಟೆಂಡರ್‌ದಾರರ ಮನವಿಯನ್ನು ನ್ಯಾಯಾಲಯವು ತಿರಸ್ಕರಿಸಿ ವಜಾಗೊಳಿಸಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಟೆಂಡರ್‌ನ ಪ್ರಕ್ರಿಯೆಯನ್ನು ಮುಂದುವರೆಸಿ ಈಗಾಗಲೇ ಅಧ್ಯಕ್ಷರು, ರಿಮ್ಸ್ ಖರೀದಿ ಸಮಿತಿ ಸಭೆ ಇವರಿಗೆ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಲಾಗಿರುತ್ತದೆ.

ಕಾರಣ ದಿನಾಂಕ 27.09.2018 ರಿಂದ ಹೊಸ ಕಾರ್ಯಾದೇಶ ನೀಡುವವರೆಗೆ ಮೆ॥ ಆರ್.ವಿ ಜಾನ್ (ರಾಜಣ್ಣ ಸೆಕ್ಯೂರಿಟಿ ಇಂಟಲಿಜೆಂನ್ಸ್ ಸರ್ವಿಸ್), ರಾಯಚೂರು ಇವರ ಸೇವೆಯನ್ನು ಮುಂದುವರೆಸಿರುವ ಕುರಿತು ಘಟನೋತ್ತರ ಅನುಮೋದನೆ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

**ದಿನಾಂಕ 27.09.2018 ರಿಂದ ಹೊಸ 29.07.2020ರ ವರೆಗೆ ಮೆ॥ ಆರ್.ವಿ ಜಾನ್ (ರಾಜಣ್ಣ ಸೆಕ್ಯೂರಿಟಿ ಇಂಟಲಿಜೆಂನ್ಸ್ ಸರ್ವಿಸ್), ರಾಯಚೂರು ಇವರ ಸೇವೆಯನ್ನು ಮುಂದುವರೆಸಿರುವ ಕುರಿತು ಪರಿಶೀಲಿಸಿ, ಘಟನೋತ್ತರ ಅನುಮೋದನೆ ನೀಡಲಾಯಿತು.**

| ವಿಷಯ ಸೂಚಿ ಸಂಖ್ಯೆ – 36 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |
|---|---|

ಅಧ್ಯಕ್ಷರ ಅಪ್ಪಣೆ ಮೇರೆಗೆ ಯಾವುದೇ ವಿಷಯಗಳು ಚರ್ಚೆಗೆ ಬಾರದೇ ಇರುವುದರಿಂದ ಆರ್ಥಿಕ ಸಮಿತಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | |
|---|---|---|
| (ಶ್ರೀ ವಿಜಯ ಶಂಕರ್), ಆರ್ಥಿಕ ಸಲಹೆಗಾರರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು | (ಡಾ.ಬಸವರಾಜ್ ವಿ. ಪೀರಾಪುರ್), ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು | (ಶ್ರೀ ಟಿ.ಕೆ.ಅನಿಲ್ ಕುಮಾರ್) ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು |